RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| ಭಾಗ–I | ಬೆಂಗಳೂರು, ಮಂಗಳವಾರ, ಆಗಸ್ಟ್ ೨, ೨೦೧೬ (ಶ್ರಾವಣ ೧೧, ಶಕ ವರ್ಷ ೧೯೩೮) | ನಂ. ೯೮೮ |
|---|---|---|
| Part–I | Bengaluru, Tuesday, August 2, 2016 (Shravana 11, Shaka Varsha 1938) | No. 988 |


**ಇಂಧನ ಸಚಿವಾಲಯ**

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** : ವಿದ್ಯುತ್ ಪರಿವೀಕ್ಷಣಾ ಇಲಾಖೆಯ ವಿವಿಧ ಸೇವೆಗಳನ್ನು ಇ–ಆಡಳಿತ ವ್ಯವಸ್ಥೆಯ ಅಡಿಯಲ್ಲಿ ಆನ್–ಲೈನ್‌ನಲ್ಲಿ (ಇ–ಸುರಕ್ಷಾ) ಒದಗಿಸುವ ಕುರಿತು.

**ಓದಲಾಗಿದೆ** : ಪತ್ರ ಸಂಖ್ಯೆ: ಮುವಿಪ/ವಿಪಇ/ಎಲ್‌ಇಸಿ/13673/2016–17 ದಿನಾಂಕ: 15.07.2016

**ಪ್ರಸ್ತಾವನೆ:–**

ವಿದ್ಯುತ್ ಪರಿವೀಕ್ಷಣಾ ಇಲಾಖೆಯು ವಿದ್ಯುಚ್ಛಕ್ತಿ ಕಾಯ್ದೆ 2003, ಕೇಂದ್ರೀಯ ವಿದ್ಯುತ್ ಪ್ರಾಧಿಕಾರ (ಮೆಸರ್ಸ್ ರಿಲೇಟಿಂಗ್ ಟು ಸೇಫ್ಟಿ ಮತ್ತು ಎಲೆಕ್ಟ್ರಿಕ್ ಸಪ್ಲೇ) ರೆಗ್ಯೂಲೇಷನ್ 2010 ಮತ್ತು ಕರ್ನಾಟಕ (ವಿದ್ಯುಚ್ಛಕ್ತಿ ಬಳಕೆ / ಮಾರಾಟ ಮೇಲಣ ತೆರಿಗೆ) ಕಾಯ್ದೆ 1959, ಕರ್ನಾಟಕ (ವಿದ್ಯುಚ್ಛಕ್ತಿ ಬಳಕೆ/ಮಾರಾಟ ಮೇಲಿನ ತೆರಿಗೆ ನಿಯಮ 2014, ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರುಗಳ ಮತ್ತು ಪ್ಯಾಸೆಂಜರ್ ಕನ್ವೇಯರ್ ಕಾಯ್ದೆ 2012, ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರುಗಳ ಮತ್ತು ಪ್ಯಾಸೆಂಜರ್ ಕನ್ವೇಯರ್ ನಿಯಮ 2015, ಮತ್ತು ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿಶೇಶ ತಂತಿ ಕೆಲಸಗಾರರ ರಹದಾರಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು 2012, ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 1964, ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು 2014 ಮತ್ತು ವಿದ್ಯುತ್ ಸಂಬಂಧಿತ ನಿಯಮ/ನಿಯಮಾವಳಿಗಳ ಅಡಿಯಲ್ಲಿ ನೀಡಲಾಗುವ ಸೇವೆಗಳು ಈ ಕೆಳಕಂಡಂತೆ ಇರುತ್ತದೆ.

1) ಹೆಚ್.ಟಿ ಮತ್ತು ಇ.ಹೆಚ್.ಟಿ ವಿದ್ಯುತ್ ಸ್ಥಾಪವರಗಳು/ವಿದ್ಯುತ್ ಜನಕಗಳು/ಖಾಸಗಿ ವಿದ್ಯುತ್ ಉತ್ಪಾದನಾ ಘಟಕಗಳು / ಎಸ್.ಇ.ಡ.ಬ್ಲ್ಯೂ ಲೇಔಟ್‌ಗಳು/ಎಮ್.ವಿ ಮತ್ತು ಎಲ್.ವಿ ವಿದ್ಯುತ್ ಸ್ಥಾವರಗಳು/ವಿದ್ಯುತ್ ಸ್ವೀಕರಣಾ ಅಥವಾ ಸರಬರಾಜು ಅಥವಾ ಮರು ಸರಬರಾಜು ಸ್ಥಾವರಗಳ ಕೇಂದ್ರಗಳು /ಕವಿನಿನಿ/ಕವಿಪ್ರನಿನಿ/ಎಸ್ಕಾಂಗಳು/ಹುಕ್ಕೇರಿ ವಿದ್ಯುತ್ ಗ್ರಾಹಕರ ಸಂಘ/ ಗ್ರಾಹಕರ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆಗಳ ಅನುಮೋದನೆಗಳು.

2) ಹೆಚ್.ಟಿ ಮತ್ತು ಇ.ಹೆಚ್.ಟಿ ವಿದ್ಯುತ್ ಸ್ಥಾವರಗಳು / ವಿದ್ಯುತ್ ಜನಕಗಳು/ ಖಾಸಗಿ ವಿದ್ಯುತ್ ಉತ್ಪಾದನಾ ಘಟಕಗಳು/ಎಸ್.ಇ.ಡಬ್ಲ್ಯೂ.ಲೇ ಔಟ್‌ಗಳು / ಎಮ್.ವಿ ಮತ್ತು ಎಲ್.ವಿ ವಿದ್ಯುತ್ ಸ್ಥಾವರಗಳು/ವಿದ್ಯುತ್ ಸ್ವೀಕರಣಾ ಅಥವಾ ಮರು ಸರಭರಾಜು ಸ್ಥಾವರಗಳ ಕೇಂದ್ರಗಳು / ಕವಿನಿನಿ/ಕವಿಪ್ರನಿನಿ/ಎಸ್ಕಾಂಗಳು/ಹುಕ್ಕೇರಿ ವಿದ್ಯುತ್ ಗ್ರಾಹಕ ಸಂಘ / ಗ್ರಾಹಕರ ವಿದ್ಯುತ್ ಸ್ಥಾವರಗಳ ಸ್ಥಾಪನಾ ಪರಿವೀಕ್ಷಣೆ ಮತ್ತು ವಿದ್ಯುತ್ ಸುರಕ್ಷತಾ ಪತ್ರಗಳ ಮಂಜೂರಾತಿಗಳು.

3) ಲಿಫ್ಟ್ / ಪ್ಯಾಸೆಂಜರ್ ಕನ್ವೆಯರ್ / ಎಸ್ಕಲೇಟರ್ ಸ್ಥಾವರಗಳ ಸ್ಥಾಪನಾ ನೀಲಿ ನಕ್ಷೆ ಅನುಮೋದನೆಗಳು.
4) ಲಿಫ್ಟ್/ ಪ್ಯಾಸೆಂಜರ್ ಕನ್ವೆಯರ್ / ಎಸ್ಕಲೇಟರ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಚಾಲನಾ ಪರವಾನಗಿ ಮಂಜುರಾತಿಗಳು ಮತ್ತು ನವೀಕರಣ.
5) ಲಿಫ್ಟ್ / ಪ್ಯಾಸೆಂಜರ್ ಕನ್ವೆಯರ್ / ಎಸ್ಕಲೇಟರ್ ಹಾಲಿ ಇರುವ ಸ್ಥಾವರಗಳಲ್ಲಿ ಸೇರ್ಪಡೆ ಅಥವಾ ಮಾರ್ಪಾಡುಗಳಿಗೆ ಅನುಮೋದನೆ.
6) ಲಿಫ್ಟ್ / ಪ್ಯಾಸೆಂಜರ್ ಕನ್ವೆಯರ್ / ಎಸ್ಕಲೇಟರ್‌ಗಳ ತಯಾರಕರ ನೋಂದಣಿ ಮಂಜೂರಾತಿ ಮತ್ತು ನವೀಕರಣ ಪ್ರಕ್ರಿಯೆಗಳು.
7) ಹೆಚ್.ಟಿ ಮತ್ತು ಇ.ಹೆಚ್.ಟಿ ವಿದ್ಯುತ್ ಸ್ಥಾವರಗಳು / ವಿದ್ಯುತ್ ಜನಕಗಳು / ಖಾಸಗಿ ವಿದ್ಯುತ್ ಉತ್ಪಾದನಾ ಘಟಕಗಳು /ಎಸ್.ಇ.ಡಬ್ಲ್ಯೂ ಲೇ ಔಟ್‌ಗಳು / ಎಮ್.ವಿ ಮತ್ತು ಎಲ್.ವಿ ವಿದ್ಯುತ್ ಸ್ಥಾವರಗಳು/ವಿದ್ಯುತ್ ಸ್ವೀಕರಣಾ ಅಥವಾ ಸರಬರಾಜು ಅಥವಾ ಮರು ಸರಬರಾಜು ಸ್ಥಾವರಗಳ ಕೇಂದ್ರಗಳು/ಕವಿನಿನಿ/ಕವಿಪ್ರನಿನಿ/ಎಸ್ಕಾಂಗಳು/ಹುಕ್ಕೇರಿ ವಿದ್ಯುತ್ ಗ್ರಾಹಕರ ಸಂಘ/ ಗ್ರಾಹಕರ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಗಳು.
8) ವಿದ್ಯುತ್ ಸಂಬಂಧಿತ ಅಪಘಾತಗಳ ತನಿಖಾ ವರದಿ ಸಲ್ಲಿಕೆಯ ಪ್ರಕ್ರಿಯೆಗಳು.
9) ವಿದ್ಯುಚ್ಛಕ್ತಿ ಬಳಕೆ ಮತ್ತು ಮಾರಾಟದ ಮೇಲಿನ ತೆರಿಗೆ ವಸೂಲಾತಿಗಳು.
10) ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ಮಂಜೂರಾತಿಗಳು.
11) ವಿದ್ಯುತ್ ಮೇಲ್ವಿಚಾರಕರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿಗಳ ಮಂಜೂರಾತಿಗಳು.
12) ತಂತೀ ಕೆಲಸಗಾರರ ರಹದಾರಿಯ ಮಂಜೂರಾತಿಗಳು.
13) ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ನವೀಕರಣಗಳು.
14) ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿಗಳ ನವೀಕರಣಗಳು.
15) ಸಿನಿಮಾ ಚಾಲಕರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿಗಳ ಮಂಜೂರಾತಿಗಳು.
16) ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿಗಳ ನಕಲು ಪ್ರತಿಗಳನ್ನು ನೀಡುವುದು.
17) ವಿಶೇಷ ತಂತೀ ಕೆಲಸಗಾರರ ರಹದಾರಿಯ ಮಂಜೂರಾತಿ ಮತ್ತು ನವೀಕರಣಗಳು.
18) ವಿದ್ಯುತ್ ಮೇಲ್ವಿಚಾರಕರ (ಸಾಮಾನ್ಯ ಮತ್ತು ಗಣಿ) ಮತ್ತು ತಂತೀ ಕೆಲಸಗಾರರ ಗ್ರೇಡ್-2 ರಹದಾರಿಗಳ ನೀಡುವ ಪರೀಕ್ಷೆಗಳನ್ನು ನಡೆಸುವುದು.
19) ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಿದ್ಯುತ್ ಮೇಲ್ವಿಚಾರಕರ ಮತ್ತು ತಂತೀ ಕೆಲಸಗಾರರ ರಹದಾರಿಗಳ ಅಮಾನತ್ತು ಪ್ರಕ್ರಿಯೆಗಳು.
20) ಖಾಯಂ/ಅರೆ ಖಾಯಂ/ಸಂಚಾರಿ/ಮಲ್ಟಿಪ್ಲೆಕ್ಸ್/ವಿಡಿಯೋ ಚಿತ್ರ ಮಂದಿಗಳ ವಿದ್ಯುತ್ ಸುರಕ್ಷತಾ ಪತ್ರಗಳನ್ನು ಮಂಜೂರಾತಿ / ನವೀಕರಣ ನೀಡುವುದು.
21) ವಿದ್ಯುತ್ ಉಪಕರಣಗಳ ಪರೀಕ್ಷೆಗಳು / ವಿದ್ಯುತ್ ಪರಿವರ್ತಕಗಳಲ್ಲಿನ ಎಣ್ಣೆ (ಆಯಿಲ್) ಸೋಸುವುದು ಮತ್ತು ಪರೀಕ್ಷಿಸುವುದು.
22) ವಿದ್ಯುತ್ ಮಾಪಕಗಳ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಪರೀಕ್ಷೆಗಳಿಗೆ ಸಾಕ್ಷಿಯಾಗಿ ಭಾಗವಹಿಸುವುದು.
23) ಖಾಯಂ/ಅರೆ ಖಾಯಂ/ಸಂಚಾರಿ/ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳ ವಿದ್ಯುತ್ ಸ್ಥಾವರದ ನೀಲಿ ನಕ್ಷೆ ಅನುಮೋದನೆಗಳು.
24) ದೂರುಗಳ ಬಗ್ಗೆ ಪರಿಶೀಲನೆ ಮತ್ತು ಪರಿಹರಿಸುವುದು.

ಈ ಮೇಲೆ ಸೂಚಿಸಿರುವ ಸೇವೆಗಳನ್ನು ಇ-ಆಡಳಿತ (ಇ.ಡಿ.ಸಿ.ಎಸ್) ಇಲಾಖೆಯ ಸಹಕಾರದೊಂದಿಗೆ ಆನ್‌ಲೈನ್ (ಇ-ಸುರಕ್ಷಾ) ವ್ಯವಸ್ಥೆಯ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ವಿಲೇ ಮಾಡುವ ಬಗ್ಗೆ ಹಾಲಿ ಪ್ರಚಲಿತವಿರುವ ವ್ಯವಸ್ಥೆಯನ್ನು ಮ್ಯಾಪಿಂಗ್ ಮಾಡಲಾಗಿರುತ್ತದೆ. ಸಾರ್ವಜನಿಕರಿಗೆ ಸರಳ, ಪಾರದರ್ಶಕವಾದ ಮತ್ತು ಉತ್ತರದಯಿತ್ವದ ಸೇವೆಯನ್ನು ನೀಡುವ

ನಿಟ್ಟಿನಲ್ಲಿ ಹೊಸ ವಿಧಾನವನ್ನು ಸಿದ್ದಪಡಿಸಲಾಗಿರುತ್ತದೆ. ಹಾಗೂ ಆನ್‌ಲೈನ್ (ಇ-ಸುರಕ್ಷಾ) ವ್ಯವಸ್ಥೆಯ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ವಿಲೇ ಮಾಡುವ ಸೇವೆಯನ್ನು ನೀಡಲು ಅಗತ್ಯವಿರುವ ತಂತ್ರಾಂಶವನ್ನು ಎನ್.ಐ.ಸಿ ಇಲಾಖೆಯು ಅಭಿವೃದ್ಧಿ ಪಡಿಸಿದ್ದು ಹಾಗೂ ಇ-ಆಡಳಿತ ಇಲಾಖೆಯವರು ವಿದ್ಯುತ್ ಪರಿವೀಕ್ಷಣಾ ಇಲಾಖೆಯಿಂದ ನೀಡಲಾಗುವ ಸೇವೆಗಳ ಬಗ್ಗೆ ವಿವರವಾದ ವರದಿಯನ್ನು ತಯಾರಿಸಿ ಅವುಗಳಿಗೆ ಸಂಬಂಧಿತ ತಂತ್ರಾಂಶವನ್ನು ಸಹ ಅಭಿವೃದ್ಧಿ ಪಡಿಸಿರುವುದರಿಂದ ಮೇಲಿನ ಎಲ್ಲಾ ಸೇವೆಗಳನ್ನು ಹಂತ ಹಂತವಾಗಿ ಆನ್‌ಲೈನ್ ವ್ಯವಸ್ಥೆಯ (ಇ-ಸುರಕ್ಷಾ) ಅಡಿಯಲ್ಲಿ ಜಾರಿಗೊಳಿಸುವ ಕುರಿತು ಮೇಲೆ ಓದಲಾದ ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರದಲ್ಲಿ ಸರ್ಕಾರದ ಅನುಮೋದನೆಯನ್ನು ಕೋರಲಾಗಿದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 175 ಇಬಿಎಸ್ 2016 ಬೆಂಗಳೂರು, ದಿನಾಂಕ: 01.08.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿದ್ಯುತ್ ಪರಿವೀಕ್ಷಣಾ ಇಲಾಖೆಯಿಂದ ವಿವಿಧ ಕಾಯ್ದೆ / ನಿಯಮಗಳಡಿ ನೀಡಲಾಗುವ ಎಲ್ಲಾ ಸೇವೆಗಳನ್ನು ಸಕಾಲದಲ್ಲಿ ಮತ್ತು ಪಾರದರ್ಶಕವಾಗಿ ನೀಡಲು ಅನುವಾಗುವಂತೆ, ಅವುಗಳನ್ನು ಹಂತ ಹಂತವಾಗಿ ಆನ್‌ಲೈನ್ (ಇ-ಸುರಕ್ಷಾ) ವ್ಯವಸ್ಥೆಯಡಿಯಲ್ಲಿ ಜಾರಿಗೊಳಿಸಲು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.

**ಎನ್. ಶಿವಕುಮಾರ್**
ಪೀಠಾಧಿಕಾರಿ,
ಇಂಧನ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು 200